KRUTHI TECHNOLOGIES
www.kruthi.co.in

# ನೇಮಕ

**ಮಾಹಿತಿ ತಂತ್ರಜ್ಞಾನದ ಕೊಡುಗೆ**

ಅಂತರಜಾಲದ ಮೂಲಕ ತಂತ್ರಾಂಶ ಕಾರ್ಯ ನಿರ್ವಹಿಸುವುದರಿಂದ ಈ ಕ್ಷೇತ್ರದ ಅನೇಕ ಸಮಸ್ಯೆಗಳನ್ನು ನಿವಾರಿಸಿ ನೇಮಕಾತಿ ಪ್ರಕ್ರಿಯೆಗೆ ನಿಖರತೆ ಹಾಗೂ ಪಾರದರ್ಶಕತೆಗಳನ್ನು ತಂದುಕೊಡುತ್ತದೆ.
ಈ ತಂತ್ರಾಂಶವೇ "ನೇಮಕ" ತಂತ್ರಾಂಶ.



**ಕನ್ನಡದಲ್ಲಿ ವಿದ್ಯುನ್ಮಾನ ಅರ್ಜಿ**

ಗ್ರಾಮೀಣ ಜನರ ಸೇವೆಯಲ್ಲಿ !



# ನೇಮಕ

ಸಂಸ್ಥೆಗಳಲ್ಲಿ ದಕ್ಷ, ಸುಶಿಕ್ಷಿತ ಸಿಬ್ಬಂದಿಗಳ ನಿಯಮಬದ್ಧ ನೇಮಕ ಅತಿ ಮುಖ್ಯ ಪ್ರಕ್ರಿಯೆ. ಸಂಸ್ಥೆಯ ವರ್ತಮಾನವನ್ನು ನಿರ್ವಹಿಸುತ್ತಾ ಭವಿಷ್ಯವನ್ನು ರೂಪಿಸುವ ಕಾರ್ಯನಿರ್ವಾಹಕರ ಪಡೆಯನ್ನು ನಿರ್ಮಿಸುವುದು ಈ ಪ್ರಕ್ರಿಯೆಯ ಗುರಿಯಾಗಿರುತ್ತದೆ.




ರಾಜ್ಯದಾದ್ಯಂತ ಅಥವಾ ರಾಷ್ಟ್ರದಾದ್ಯಂತ ಹಂಚಿಹೋಗಿರುವ ಪ್ರತಿಭಾ ಸಮೂಹದಿಂದ ಸಂಸ್ಥೆಯ ಕಾರ್ಯಚಟುವಟಿಕೆಗಳಿಗೆ ಅವಶ್ಯ ವಿದ್ಯಾರ್ಹತೆ ಹಾಗೂ ಕೌಶಲಗಳಿರುವ ಅನುಭವಿ ಸಿಬ್ಬಂದಿಯನ್ನು ಹೆಕ್ಕಿ ತೆಗೆಯುವುದು ನೇಮಕಾತಿ ಪ್ರಕ್ರಿಯೆಯ ಕಾರ್ಯ.

ಇದು ಅರ್ಜಿ ಕರೆಯುವುದು. ರಾಜ್ಯ/ರಾಷ್ಟ್ರವಲಯಗಳಲ್ಲಿ ಅರ್ಜಿಗಳು ಲಭ್ಯವಾಗುವಂತೆ ನೋಡಿಕೊಳ್ಳುವುದು. ಭರ್ತಿಯಾದ ಅರ್ಜಿಗಳನ್ನು ಪರಿಶೀಲಿಸಿ, ಅರ್ಹ ವ್ಯಕ್ತಿಗಳಿಗೆ ಪರೀಕ್ಷೆ ನಡೆಸುವುದು, ಅನಂತರ ಪರೀಕ್ಷೆಯಲ್ಲಿ ಯಶಸ್ವಿಯಾದವರ ಸಂದರ್ಶನ ನಡೆಸುವುದು ಹಾಗೂ ಅಂತಿಮವಾಗಿ ಅರ್ಹರನ್ನು ನೇಮಿಸುವುದನ್ನು ಒಳಗೊಂಡಿರುತ್ತದೆ.

Kannada Onliine Recruitment Service

# ನೇಮಕ

**'ನೇಮಕ' ತಂತ್ರಾಂಶದ ಪ್ರಮುಖ ಅಂಶಗಳು**

ತಂತ್ರಾಂಶದ ಬಳಕೆ ಸಂಸ್ಥೆಗಳಿಗೆ ನೇಮಕಾತಿಗೆ ಸಂಬಂಧಿಸಿದಂತೆ ಈ ಕೆಳಕಂಡ ಪ್ರಮುಖ ಅನುಕೂಲತೆಗಳನ್ನು ತಂದುಕೊಡುತ್ತದೆ:

1.'ನೇಮಕ' ತಂತ್ರಾಂಶದ ಜಾಲತಾಣ ಸಮರ್ಥವಾಗಿದ್ದು ಸಂಪೂರ್ಣವಾಗಿ ಕನ್ನಡದಲ್ಲಿದ್ದು ಭಾರತೀಯ ಭಾಷೆಗಳಲ್ಲಿ ಒಂದು ಅನನ್ಯ ಪ್ರಯತ್ನವಾಗಿದೆ.

2.ಕನ್ನಡದಲ್ಲಿಯೇ ವಿವರಗಳು ಲಭ್ಯವಾಗಿ, ಕನ್ನಡದಲ್ಲಿಯೇ ಅರ್ಜಿಯನ್ನು ತುಂಬಲು ಅವಕಾಶವಿರುವುದು ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ವರದಾನವಾಗಿದೆ.

3.ಈ ತಂತ್ರಾಂಶ ಕರ್ನಾಟಕ ಸರಕಾರ ಒದಗಿಸಿರುವ ಉಚಿತ ನುಡಿ ತಂತ್ರಾಂಶವನ್ನೇ ಆಧರಿಸಿದೆ. ಆದುದರಿಂದ ಎಲ್ಲೆಡೆ ಸುಲಭವಾಗಿ ದೊರೆಯುತ್ತದೆ.

4.ಸಂಸ್ಥೆಗೆ ಅರ್ಜಿಗಳನ್ನು ಮುದ್ರಿಸುವ, ವಿತರಿಸುವ ಖರ್ಚುಗಳು ಇರುವುದಿಲ್ಲ.

5.ಬ್ಯಾಂಕಿನ ಮೂಲಕವೇ ಅರ್ಜಿದಾರರು ಶುಲ್ಕ ಪಾವತಿ ಮಾಡುವುದರಿಂದ ಸಂಸ್ಥೆಗೆ ಬರುವ ಮೊಬಲಗು ಖಚಿತವಾಗಿ ಬೇಕೆಂದಾಗ ತಿಳಿಯುತ್ತದೆ.



Kannada Onliine Recruitment Service

# ನೇಮಕ



6.ತಂತ್ರಾಂಶವು ಅರ್ಹ ಅರ್ಜಿಗಳು / ಸಮರ್ಥ ಅಭ್ಯರ್ಥಿಗಳು ಮಾತ್ರ ದಾಖಲಾಗುವಂತೆ ರೂಪಿತವಾಗಿರುತ್ತದೆ. ಇದರಿಂದ ಪರಿಶೀಲನೆಯ ಬಹುಪಾಲು ಕಾರ್ಯ ಅರ್ಜಿ ಸಲ್ಲಿಸುವಾಗಲೇ ನಡೆದು, ಖಚಿತವಾದ, ಅಗತ್ಯಕ್ಕೆ ತಕ್ಕಂತಹ ಮಾಹಿತಿ ಮಾತ್ರ ದೊರೆತು ಸಂಸ್ಥೆಗೆ ಸಮಯದ ಉಳಿತಾಯವಾಗಿ, ಖರ್ಚು ಕಡಿಮೆಯಾಗುತ್ತದೆ.

7. ಹುದ್ದೆವಾರು, ಶೈಕ್ಷಣಿಕ ಅರ್ಹತೆವಾರು, ಜಿಲ್ಲೆ, ರಾಜ್ಯವಾರು, ಮತ್ತು ಇತರೆ ವಿಭಾಗವಾರು ಅರ್ಜಿಗಳು ಎಷ್ಟು ಸಲ್ಲಿಸಲಾಗಿದೆ ಎಂಬುದನ್ನು ಪ್ರತಿ ಕ್ಷಣ ಕಂಡುಕೊಳ್ಳಬಹುದಾಗಿರುತ್ತದೆ. ಇದು ಅನೇಕ ಆಡಳಿತಾತ್ಮಕ ಸಮಸ್ಯೆಗಳನ್ನು ಪರಿಹರಿಸಿ, ಪ್ರಕ್ರಿಯೆಯನ್ನು ಸುಗಮವಾಗಿಸುತ್ತದೆ.

Kannada Onliine Recruitment Service



8.ಪರೀಕ್ಷೆ ನಡೆಸಬೇಕಾದ ಸಂದರ್ಭದಲ್ಲಿ ಪ್ರವೇಶಪತ್ರ, ಪರೀಕ್ಷೆಯ ಸ್ಥಳ ಮುಂತಾದ ವಿವರಗಳು ಜಾಲತಾಣದಲ್ಲಿಯೇ ಲಭ್ಯವಾಗುತ್ತದೆ. ಆದುದರಿಂದ ಅದನ್ನು ಮುದ್ರಿಸುವ, ಅಂಚೆಯಲ್ಲಿ ಕಳಿಸುವ ಖರ್ಚುಗಳು ಉಳಿಯುತ್ತವೆ. ಮಾತ್ರವಲ್ಲದೆ, ಅದು ಅಂಚೆಯಲ್ಲಿ ಕಳೆದುಹೋಗುವ, ದ್ವಿಪ್ರತಿ ಪ್ರವೇಶಪತ್ರಗಳನ್ನು ಒದಗಿಸುವ ಅವಶ್ಯಕತೆ ಇರುವುದಿಲ್ಲ.

9.ಫಲಿತಾಂಶವನ್ನು ಸಹ ಜಾಲತಾಣದಲ್ಲಿಯೇ ನೀಡಬಹುದು. ಇದರಿಂದಾಗಿಯೂ ಸಂಸ್ಥೆಗಳಿಗೆ ಆರ್ಥಿಕ ಉಳಿತಾಯವಾಗುತ್ತದೆ.



ನೇಮಕ



ರಾಜ್ಯದಾದ್ಯಂತ ಅಥವಾ ರಾಷ್ಟ್ರದಾದ್ಯಂತ ಹಂಚಿಹೋಗಿರುವ ಪ್ರತಿಭಾ ಸಮೂಹದಿಂದ ಸಂಸ್ಥೆಯ ಕಾರ್ಯಚಟುವಟಿಕೆಗಳಿಗೆ ಅವಶ್ಯ ವಿದ್ಯಾರ್ಹತೆ ಹಾಗೂ ಕೌಶಲಗಳಿರುವ ಅನುಭವಿ ಸಿಬ್ಬಂದಿಯನ್ನು ಹೆಕ್ಕಿ ತೆಗೆಯುವುದು ನೇಮಕಾತಿ ಪ್ರಕ್ರಿಯೆಯ ಕಾರ್ಯ.

ಇದು ಅರ್ಜಿ ಕರೆಯುವುದು. ರಾಜ್ಯ/ರಾಷ್ಟ್ರವಲಯಗಳಲ್ಲಿ ಅರ್ಜಿಗಳು ಲಭ್ಯವಾಗುವಂತೆ ನೋಡಿಕೊಳ್ಳುವುದು. ಭರ್ತಿಯಾದ ಅರ್ಜಿಗಳನ್ನು ಪರಿಶೀಲಿಸಿ, ಅರ್ಹ ವ್ಯಕ್ತಿಗಳಿಗೆ ಪರೀಕ್ಷೆ ನಡೆಸುವುದು, ಅನಂತರ ಪರೀಕ್ಷೆಯಲ್ಲಿ ಯಶಸ್ವಿಯಾದವರ ಸಂದರ್ಶನ ನಡೆಸುವುದು ಹಾಗೂ ಅಂತಿಮವಾಗಿ ಅರ್ಹರನ್ನು ನೇಮಿಸುವುದನ್ನು ಒಳಗೊಂಡಿರುತ್ತದೆ.

### ಮಾಹಿತಿ ತಂತ್ರಜ್ಞಾನದ ಕೊಡುಗೆ

ಅಂತರಜಾಲದ ಮೂಲಕ ತಂತ್ರಾಂಶ ಕಾರ್ಯ ನಿರ್ವಹಿಸುವುದರಿಂದ ಈ ಕ್ಷೇತ್ರದ ಅನೇಕ ಸಮಸ್ಯೆಗಳನ್ನು ನಿವಾರಿಸಿ ನೇಮಕಾತಿ ಪ್ರಕ್ರಿಯೆಗೆ ನಿಖರತೆ ಹಾಗೂ ಪಾರದರ್ಶಕತೆಗಳನ್ನು ತಂದುಕೊಡುತ್ತದೆ.
ಈ ತಂತ್ರಾಂಶವೇ "ನೇಮಕ" ತಂತ್ರಾಂಶ.

ನೇಮಕ